# Simharoopanada Shri Hari

**Kannada lyrics on top, English singing lyrics below**

## Kannada

ಸಿಂಹರೂಪನಾದ ಶ್ರೀಹರಿ, ಶ್ರೀ ನಾಮಗಿರೀಶನೇ ||2||

ಒಮ್ಮನದಿಂದ ತನ್ನನು ಭಜಿಪರ (2)

ಸಮ್ಮತದಿಂದ ಕಾಯ್ವೇನೆಂದ ಹರಿ ! ಸಿಂಹರೂಪನಾದ

ತರಳನು ಕರೆಯೆ ಸ್ತಂಭವು ಬಿರಿಯೇ

ತುಂಬು ಉಗ್ರವ ತೋರಿದನು

ಕರಳನು ಬಗೆದು....(2) ಕೊರಳೊಳಗಿತ್ತು

ತರಳನ ಸಲಹಿದ ಶ್ರೀ ನರಸಿಂಹನೆ ! ಸಿಂಹರೂಪನಾದ!

ಭಕ್ತರೆಲ್ಲ ಕೂಡಿ ಬಹು ದೂರ ಓಡಿ

ಪರಮ ಶಾಂತವನು ಬೇಡಿದರು ||2||

ಕರೆದು ತರುಳನ... (2) ತೊಡೆಯೊಳು ಕುಳಿಸದ

ಪರಮ ಹರುಷವನು ಹೊಂದಿದ ಶ್ರೀಹರಿ|ಸಿಂಹರೂಪನಾದ!

ಜಯ ಜಯ ಜಯವೆಂದು ಹೂವನು ತಂದು

ಹರಿ ಹರಿ ಹರಿಯೆಂದು ಸುರರೆಲ್ಲ ಸುರಿಸೆ ||2||

ಭಯ ನಿವಾರಣ...(2) ಭಾಗ್ಯ ಸ್ವರೂಪನೇ

ಪರಮ ಪುರುಷ ಶ್ರೀಪುರಂದರ ವಿಠ್ಠಲನೇ !ಸಿಂಹರೂಪನಾದ!

---

## English

Simharoopanaada shreehari, shree naamagireeshane | ||2|| |

Ommanadimda tannanu bhajipara (2)

Sammatadimda kaayvenemda hari ! simharoopanaada

Taralanu kareye sthambhavu biriye

Tumbu ugrava toridanu

Karalanu bagedu….(2) koralolagittu

Taralana salahida shree narasimhane ! simharoopanaada!

Bhaktarella koodi bahu doora odi

Parama shaamtavanu bedidaru | ||2|| |

Karedu tarulana... (2) todeyolu kulisada

Parama harushavanu homdida shreehari|simharoopanaada!

Jaya jaya jayavemdu hoovanu tamdu

Hari hari hariyemdu surarella surise | ||2|| |

Bhaya nivaarana…(2) bhaagya svaroopane

Parama purusha shreepuramdara viththalane !simharoopanaada!